ದಿನಾಂಕಃ 05-04-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ . ಬಿ ಎಸ್ ಜೆ ವಕೀಲರಿಂದ.

ಸಿಸಿ ನಂ.190/2019 ರ ರೋಜನಾಮೆಯ ದೃಢೀಕೃತ ನಕಲು, ಅನಂತ ಹಳ್ಳಣ್ಣನವರ, ನವೀನ ಹೆಬ್ಬಳ್ಳಿ, ಪ್ರಶಾಂತ ವರೂರ, ಸರಸ್ವತಿ ಲಂಗೋಟಿ ಇವರುಗಳ ಹೇಳಿಕೆಗಳ ದೃಢೀಕೃತ ನಕಲುಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಪಿ-34 ರಿಂದ ನಿಪಿ-38 ಎಂದು ಗುರುತಿಸಲಾಯಿತು.

ಈಗ ಮತ್ತೆ ಅರ್ಜಿಯನ್ನು ಖರ್ಚು ಸಹಿತ ಮಂಜೂರು ಮಾಡಲು ಪ್ರಾರ್ಥಿಸುತ್ತೇನೆ.

ಪಾಟೀ ಸವಾಲುಃ- ಎದುರುದಾರರ ನಂ.2 ಪರ ಶ್ರೀ. ಎನ್ ಡಿ ವಕೀಲರಿಂದ.

ಅಪಘಾತ ಆಗಿದೆ ಎಂದು ಹೇಳಲಾದ ದಿವಸದಂದು ನಾವು ದ್ವಿಚಕ್ರ ವಾಹನದ ಮೇಲೆ 3 ಜನರು ಸವಾರಿ ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ಅಪಘಾತ ಆದ ನಂತರ ನಾನು ಹಾವೇರಿ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆಂದು ಸೇರಿಕೆ ಆಗಿರುತ್ತೇನೆ. ಆಗ ನನ್ನ ಮಗಳು ನನ್ನನ್ನು ನೋಡಿಕೊಳ್ಳಲು ಬಂದಿದ್ದರು ಎಂದರೆ ಸರಿ. ಆ ದಿವಸ ನನ್ನ ಜೊತೆಗೆ ನನ್ನ ಮಗಳು ಸಹ ವೈದ್ಯರಿಂದ ಚಿಕಿತ್ಸೆ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆ ದಿವಸ ನನ್ನೊಂದಿಗೆ ನನ್ನ ಮಗಳು ಸಹ ಅಪಘಾತದ ಗಾಯಕ್ಕೆ ಚಿಕಿತ್ಸೆ ಪಡೆದುಕೊಂಡಿದ್ದರೂ ಪಡೆದುಕೊಂಡಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದ ಬಗ್ಗೆ ಅದು ಹೇಗೆ ಆಗಿರುತ್ತದೆ ಎಂಬ ಬಗ್ಗೆ ವೈದ್ಯರಿಗೆ ನಾನೇ ಮಾಹಿತಿ ನೀಡಿರುತ್ತೇನೆ

ಎಂದರೆ ಸರಿಯಲ್ಲ. ಹಾಗೇ ಮಾಹಿತಿ ಕೊಟ್ಟಿದ್ದರೂ ಈ ಅರ್ಜಿಯಲ್ಲಿ ಪರಿಹಾರ ಪಡೆಯುವ ಉದ್ದೇಶದಿಂದ ಮಾಹಿತಿ ಕೊಟ್ಟಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಆದ ನಂತರ ನನ್ನನ್ನು ಪೊಲೀಸರು ಠಾಣೆಗೆ ಯಾವತ್ತು ಕರೆಸಿಲ್ಲ. ಪೊಲೀಸರು ಠಾಣೆಯಲ್ಲಿ ನನ್ನ ಹೇಳಿಕೆಯನ್ನು ಯಾವತ್ತು ಪಡೆದುಕೊಂಡಿಲ್ಲ ಎಂದರೆ ಸರಿ. ದ್ವಿಚಕ್ರ ವಾಹನದ ಮೇಲೆ ಚಾಲಕ ಮತ್ತು ಒಬ್ಬ ಹಿಂಬದಿ ಸವಾರನಿಗೆ ಮಾತ್ರ ಪ್ರಯಾಣ ಮಾಡುವ ಅವಕಾಶ ಇರುತ್ತದೆ ಎಂದರೆ ಸರಿ. 3 ಜನ ಕುಳಿತು ಪ್ರಯಾಣ ಮಾಡಿದ್ದಲ್ಲಿ ಸವಾರನಿಗೆ ವಾಹನ ಚಲಾವಣೆ ಮಾಡಲು ತೊಂದರೆ ಆಗುತ್ತದೆ ಎಂದರೆ ಸರಿ. ದ್ವಿಚಕ್ರ ವಾಹನದ ಚಾಲಕನಿಗೆ ವಾಹನ ಚಾಲನೆ ಮಾಡುವ ಚಾಲನೆ ಪತ್ರ ಮತ್ತು ವಾಹನಕ್ಕೆ ವಿಮೆ ಇದ್ದ ಬಗ್ಗೆ ತಿಳಿದುಕೊಂಡಿಲ್ಲ. ದ್ವಿಚಕ್ರ ವಾಹನದ ಚಾಲಕನಿಗೆ ಚಾಲನೆ ಪ್ರಮಾಣ ಪತ್ರ ಮತ್ತು ವಾಹನಕ್ಕೆ ವಿಮೆ ಇರಲಿಲ್ಲ. ಸದರಿ ಅಪಘಾತ ವಾಹನ ನನ್ನ ಗಂಡನದು ಎಂದರೆ ಸರಿಯಲ್ಲ. ಸಾಕ್ಷಿ ಅದು ನನ್ನ ಮಗನದು ಎಂದು ನುಡಿಯುತ್ತಾರೆ. ಭವ್ಯ ನನ್ನ ಮಗಳು ಎಂದರೆ ಸರಿ. ಅಪಘಾತ ನನ್ನ ಗಂಡನ ವಾಹನ ಚಾಲನಾ ಪ್ರಮಾಣ ಪತ್ರ ಇಲ್ಲದ್ದರಿಂದ ಆತನ ದುಡುಕುತನದ ವಾಹನ ಚಾಲನೆಯಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಆದ್ದರಿಂದ 2 ನೇ ಎದುರುದಾರರು ನಮಗೆ ಯಾವುದೇ ಪರಿಹಾರ ನೀಡುವ ಹೊಣೆಗಾರಿಕೆ ಹೊಂದಿಲ್ಲ ಎಂದರೆ ಸರಿಯಲ್ಲ. ವಾಹನಕ್ಕೆ ವಿಮೆ ಇಲ್ಲದ ಕಾರಣ ಚಾಲಕನ ನಿರ್ಲಕ್ಷತನದಿಂದ ಆಗಿರುವುದರಿಂದ 2 ನೇ ಎದುರುದಾರರು ಯಾವುದೇ ಹೊಣೆಗಾರಿಕೆ ಹೊಂದಿಲ್ಲ ಎಂದರೆ ಸರಿಯಲ್ಲ. ಪರಿಹಾರ ಹಣವನ್ನು ಪಡೆಯುವ ಉದ್ದೇಶದಿಂದ ನಾನು 2 ನೇ ಎದುರುದಾರರ ಮೇಲೆ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

ಎಂ ವಿ ಸಿ ನಂ. 1215/2021
ಪಿ.ಡಬ್ಲು- 1

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).